MARCH 28, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

ಹಾವೇರಿ ಜಿಲ್ಲೆ, ಬ್ಯಾಡಗಿ ತಾಲೂಕಿನ, ಆದರ್ಶ ಸೆಂಟ್ರಲ್ ಶಾಲೆಯ, 9ನೇ ತರಗತಿ ವಿದ್ಯಾರ್ಥಿ, ತನ್ವೀರ ಜಮೀರ ರಿತ್ತಿ, ಶಾಲಾ ಶಿಕ್ಷಣ ಇಲಾಖೆಯ, *'ಸೈನ್ಸ್ ಇನ್ಸ್ಪೈರ್ ಅವಾರ್ಡ್'* ಪ್ರದರ್ಶಿನಿಯಲ್ಲಿ ಪಾಲ್ಗೊಂಡು, ಗಮನಾರ್ಹ ಸಾಧನೆಗೈದ ಹಿನ್ನೆಲೆ, ಜಪಾನ್ ದೇಶದಲ್ಲಿ ಆಯೋಜಿತ, ಜಪಾನ್–ಏಷ್ಯಾ ಯುವ ವಿಜ್ಞಾನ ವಿನಿಮಯ ಕಾರ್ಯಕ್ರಮಕ್ಕೆ, ಆಯ್ಕೆಯಾಗಿದ್ದಾರೆ. ಕೇಂದ್ರ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ವಿನಿಮಯ ಕಾರ್ಯಕ್ರಮದಡಿ, ಅಂತಾರಾಷ್ಟ್ರೀಯ ವಿಜ್ಞಾನ ಸಮ್ಮೇಳನಕ್ಕೆ ಆಯ್ಕೆಯಾದ ತನ್ವೀರ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ತನ್ವೀರ ಜಮೀರ ರಿತ್ತಿ ಧ್ವನಿ 31 ಸೆಕೆಂದುಗಳು

ಹರ್ಷ/ಬಿ.ಇ.ಓ. ಹಾವೇರಿ/ಡಿಡಿಪಿಐ ಧಾ. ಗಿರೀಶ ಪದಕಿ

<><><>

ರಂಗಭೂಮಿ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮೂಡಿಸಲು, ಪಠ್ಯದಲ್ಲಿ ಅಳವಡಿಸುವ ಬಗ್ಗೆ, ಶಿಕ್ಷಣ ಇಲಾಖೆಗೆ ಮನವಿ ಮಾಡಲಾಗಿದ್ದು, ಸಕಾರಾತ್ಮಕ ಪ್ರತಿಕ್ರಿಯೆ ದೊರೆತಿದೆ ಎಂದು, ರಾಜ್ಯ ನಾಟಕ ಅಕಾದೆಮಿ ಸದಸ್ಯ, ಬಾಬಾಸಾಹೇಬ ಕಾಂಬಳೆ ತಿಳಿಸಿದ್ದಾರೆ.

ಬೆಳಗಾವಿಯಲ್ಲಿ ಆಯೋಜಿಸಿದ್ದ, ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಮಾತನಾಡಿದ ಅವರು, ರಂಗಭೂಮಿ ಸೃಜನಶೀಲ ಕಲಾ ಮಾಧ್ಯಮವಾಗಿದೆ ಎಂದರು. ರಂಗಕರ್ಮಿ, ರವಿ ಕೋಟಾರಗಸ್ತಿ ಕಾರ್ಯಕ್ರಮ ಉದ್ಘಾಟಿಸಿದರು.

<><><>

ಭಗವಾನ್ ಶ್ರೀ ಮಹಾವೀರರ ಜಯಂತಿ ಪ್ರಯುಕ್ತ, ರಜಾ ದಿನ ಮಾರ್ಪಾಡಾದ ಹಿನ್ನೆಲೆ, ಎಸ್.ಎಸ್.ಎಲ್.ಸಿ. ತೃತೀಯ ಭಾ ಿ ಪರೀಕ್ಷೆಯನ್ನು, ನಾಡಿದ್ದು ಸೋಮವಾರ, 30ರ ಬದಲಾಗಿ, 31ನೇ ತಾರೀಖು ಮಂಗಳವಾರ, ನಡೆಸಲು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ, ನಿರ್ಧರಿಸಿದೆ.

<><><>

ಕೊಪ್ಪಳ ಜಿಲ್ಲೆಯಲ್ಲಿ, ಕಳೆದ ಎರಡು ದಿನಗಳ ಅಂತರದಲ್ಲಿ, ಐದು ಬಾಲ್ಯ ವಿವಾಹ ಪ್ರಕರಣಗಳನ್ನು, ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು, ತಡೆದಿದ್ದಾರೆ. ಮಕ್ಕಳ ಸಹಾಯವಾಣಿ, 1098ಕ್ಕೆ ಅಪ್ರಾಪ್ತ ಹೆಣ್ಣು ಮಕ್ಕಳ ಬಾಲ್ಯ ವಿವಾಹದ ಕುರಿತು, ಬಂದ ಕರೆಗಳನ್ನು ಆಧರಿಸಿ, ಯಲಬುರ್ಗಾ ತಾಲೂಕಿನ, ಬೇವೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ, ಇಬ್ಬರು ಬಾಲಕಿಯರು, ಯಲಬುರ್ಗಾದಲ್ಲಿ ಓರ್ವಳು ಹಾಗೂ ಕಾರಟಗಿಯಲ್ಲಿ, ಇಬ್ಬರು ಬಾಲಕಿಯರ ವಿವಾಹ ತಡೆಯಲಾಗಿದೆ ಎಂದು, ಮಕ್ಕಳ ಜಿಲ್ಲಾ ರಕ್ಷಣಾಧಿಕಾರಿ, ಸಿಂಧು ಅಂಗಡಿ, ತಿಳಿಸಿದ್ದಾರೆ.

<><><>

ಹಿರಿಯ ರಂಗಕರ್ಮಿ, ಧಾರವಾಡದ ರವಿ ಕುಲಕರ್ಣಿ ಅವರಿಗೆ, ಬೆಳಗಾವಿಯ ವೇನಾಸಂ ಸಂಸ್ಥೆ, ವೇಣು ಸಿರಿ ರಂಗ ಸಮ್ಮಾನ್ ಪ್ರಶಸ್ತಿ ನೀಡಿ, ಗೌರವಿಸಲಿದೆ. ಬೆಳಗಾವಿಯ ನೆಹರೂ ನಗರದ, ಕನ್ನಡ ಭವನದಲ್ಲಿ, ನಾಳೆ ಸಂಜೆ ಸನ್ಮಾನ ಸಮಾರಂಭ ಜರುಗಲಿದೆ. ಬಳಿಕ, ರಂಗಕರ್ಮಿ ಧಾರವಾಡದ, ಮಹಾದೇವ ಹಡಪದ ನಿರ್ದೇಶನದ, 'ನಾ ರಾಜಗುರು' ನಾಟಕ ಪ್ರದರ್ಶನಗೊಳ್ಳಲಿದೆ.

<><><>

ರೇಲ್ವೆ ಮುಖ್ಯ ಸುರಕ್ಷತಾ ಆಯುಕ್ತ, ಜನಕ ಕುಮಾರ ಗರ್ಗ್, ತುಮಕೂರು, ರಾಯದುರ್ಗ ರೇಲ್ವೆ ಮಾರ್ಗ ಯೋಜನೆಯ ಭಾಗವಾದ, ತುಮಕೂರು, ಊರುಕೆರೆ ಮಧ್ಯದ, 11 ಕಿಲೋ ಮೀಟರ್ ರೇಲ್ವೆ ಮಾರ್ಗ, ಹಾಗೂ ತುಮಕೂರು – ಚಿತ್ರದುರ್ಗ–ದಾವಣಗೆರೆ ರೇಲ್ವೆ ಮಾರ್ಗ ಯೋಜನೆಯ ಭಾಗವಾದ, ಊರುಕೆರೆ– ತಿಮ್ಮರಾಜನಹಳ್ಳಿ ಮಧ್ಯದ, 13 ಕಿಲೋ ಮೀಟರ್ ರೇಲ್ವೆ ಮಾರ್ಗದ, ತಪಾಸಣೆ ಮತ್ತು ವೇಗದ ಪರೀಕ್ಷೆ ಕೈಗೊಂಡರು.

<><><>

ಭಾರತೀಯ ರೇಲ್ವೆ, ಪ್ರಯಾಣಿಕರ ಸುರಕ್ಷತೆ ಮತ್ತು ಭದ್ರತೆಗೆ, ಆದ್ಯತೆ ನೀಡಿದೆ. ಕಳೆದ 2021 ರಿಂದ 2025ರ ಅವಧಿಯಲ್ಲಿ, 50 ಸಾವಿರ ಅಪರಾಧಿಗಳ ವಿರುದ್ಧ, ನ್ಯಾಯಾಲಯದಲ್ಲಿ, 52 ಸಾವಿರಕ್ಕೂ ಹೆಚ್ಚು, ದೂರುಗಳು ದಾಖಲಿಸಿ, ಕಾನೂನು ಪ್ರಕಾರ ಕ್ರಮ ಕೈಗೊಂಡಿದೆ. 12 ಸಾವಿರದ 157 ಕಲ್ಲು ತೂರಾಟ ಪ್ರಕರಣಗಳಲ್ಲಿ, 8 ಸಾವಿರದ 4 ನೂರಾ 41 ಜನರನ್ನು ಬಂಧಿಸಿ, ಶಿಕ್ಷೆ ವಿಧಿಸಲಾಗಿದೆ.

<><><>

ಕೊಲ್ಲಿ ಹಾಗೂ ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ, ಸಂಘರ್ಷದ ಹಿನ್ನೆಲೆ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ, ಕೇಂದ್ರ ಅಬಕಾರಿ ಸುಂಕವನ್ನು, ಕೇಂದ್ರ ಸರ್ಕಾರ, ಪ್ರತಿ ಲೀಟರ್‌ಗೆ 10 ರೂಪಾಯಿ ಕಡಿಮೆ ಮಾಡಿದೆ ಎಂದು, ಕೇಂದ್ರ ಹಣಕಾಸು ಖಾತೆ ಸಚಿವರಾದ, ನಿರ್ಮಲಾ ಸೀತಾರಾಮನ್, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ.

<><><>

ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಸಿದ್ದಕ್ಕೆ, ಪ್ರಧಾನಮಂತ್ರಿಯವರಿಗೆ, ಧನ್ಯವಾದ ಸಲ್ಲಿಸುವುದಾಗಿ, ವಿಧಾನಸಭೆ ವಿಪಕ್ಷ ನಾಯಕ, ಆರ್.ಅಶೋಕ, ಬೆಂಗಳೂರಿನಲ್ಲಿ, ಹೇಳಿದರು.

<><><>

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್, ಐ.ಪಿ.ಎಲ್ 2026ರ, 19ನೇ ಆವೃತ್ತಿಯ, ಉದ್ಘಾಟನಾ ಪಂದ್ಯ, ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ, ಇಂದು ಸಂಜೆ 7:30ಕ್ಕೆ ಆಯೋಜಿತವಾಗಿದೆ. ರಾಯಲ್ ಚಾಲೆಂಜರ್ಸ್, ಬೆಂಗಳೂರು ಹಾಗೂ ಸನ್ ರೈಸರ್ಸ್ ಹೈದರಾಬಾದ, ಕ್ರಿಕೆಟ್ ತಂಡಗಳ ಮಧ್ಯೆ, ಉದ್ಘಾಟನಾ ಪಂದ್ಯ ನಡೆಯಲಿದೆ. ಕ್ರೀಡಾಂಗಣದ ಸುತ್ತಮುತ್ತ, ವಾಹನ ನಿಲುಗಡೆ ನಿಷೇಧಿಸಿ, ಬೇರೆಡೆ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಾಗಿದೆ.

<><><>

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ, ಉಪ ಚುನಾವಣೆ ಹಿನ್ನೆಲೆ, ಸಿದ್ಧತೆಗಳು ಪೂರ್ಣಗೊಂಡಿವೆ ಎಂದು, ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ. ಅಂತಿಮವಾಗಿ 9 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಕ್ಷೇತ್ರದಲ್ಲಿ ಒಟ್ಟು 3 ನೂರಾ 22 ಮತಗಟ್ಟೆಗಳನ್ನು, ಸ್ಥಾಪಿಸಲಾಗಿದೆ. ಒಟ್ಟು 2 ಲಕ್ಷ 59 ಸಾವಿರದ 797 ಮತದಾರರಿದ್ದಾರೆ.

<><><>

ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದ, ರಾ.ಹ ದೇಶಪಾಂಡೆ ಸಭಾಭವನದಲ್ಲಿ, ಪ್ರೊಫೆಸರ್ ಎಸ್.ಎಲ್.ಸಂಗಮ ದತ್ತಿ ಅಂಗವಾಗಿ, ಇಂದು  ಸಂಜೆ 6 ಗಂಟೆಗೆ, 'ಭಾರತೀಯ ಜ್ಞಾನ ಪರಂಪರೆ; ಸಾಗಿ ಬಂದ ದಾರಿ' ವಿಷಯ ಕುರಿತು, ಶ್ರೀರಾಮ ಭಟ್, ಉಪನ್ಯಾಸ ನೀಡಲಿದ್ದಾರೆ.

<><><>

ಆಕಾಶವಾಣಿಯ, ಬಹುಶ್ರುತ, ಮನ್ ಕಿ ಬಾತ್ ಕಾರ್ಯಕ್ರಮದ, 132 ನೇ ಆವೃತ್ತಿ, ನಾಳೆ ಬೆಳಗ್ಗೆ 11 ಗಂಟೆಗೆ, ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಜನತೆಯ ಅಭಿಪ್ರಾಯಗಳನ್ನಾಧರಿಸಿದ, ತಮ್ಮ ಮನದಾಳದ ಅನಿಸಿಕೆಗಳನ್ನು, ಹಂಚಿಕೊಳ್ಳಲಿದ್ದಾರೆ. ಬಳಿಕ, ಕನ್ನಡ ಅವತರಣಿಕೆ ಪ್ರಸಾರವಾಗಲಿದೆ.

<><><>

ಧಾರವಾಡ ಜಿಲ್ಲೆ, 18ನೇ ಕನ್ನಡ ಸಾಹಿತ್ಯ ಸಮ್ಮೇಳನ, ನಾಡಿದ್ದು 30 ಹಾಗೂ 31ರಂದು, ಕರ್ನಾಟಕ ವಿದ್ಯಾವರ್ಧಕ ಸಂಘದ, ಪಾಟೀಲ ಪುಟ್ಟಪ್ಪ ಸಭಾ ಭವನದಲ್ಲಿ ಜರುಗಲಿದೆ. ಸಮ್ಮೇಳನದ ಸರ್ವಾಧ್ಯಕ್ಷರಾಗಿ, ಸಾಹಿತಿ ಹೇಮಾ ಪಟ್ಟಣಶೆಟ್ಟಿ ಆಯ್ಕೆಯಾಗಿದ್ದಾರೆ.

**<><><>**